


**ಎಡದಿಂದ ಬಲಕ್ಕೆ:**

1. ಸಾಹುಕಾರನ ಮನೆಯಲ್ಲಿ ಇದೆಂಥ ಸಾಬೂನು? (4)
3. ಹೊಲಕ್ಕೆ ತಿರುಗಿದೊಡನೆಯೇ ವಾಗ್ವಾದ ಶುರು (3)
4. ಗೋಳು ತಪ್ಪಿಸು, ಹಣ ಸಂಪಾದಿಸು (3)
6. ಜಾಡಿ ತುಂಡಾದ ಮೇಲೆ ಎಡೆಬಿಡದ ಮಳೆ (4)
7. ಅಗೆದು ನೋಡಿ ಕಂಡೀತು ಅಂದಿನದೇ ಕಾಲಿನಾಭರಣ (3)
9. ಆತನ ಮನೆಗಿರುವ ದೂರ, ವಿಪರೀತ ಏನಿಲ್ಲ, ಬಿಡಿ (3)
11. ಬರೀ ಶಿಕ್ಷಿಸುವವರಿಂದ ಕಾಪಾಡಿ (3)
13. ಅಂಥ ಉಡುಗೆ ಹೊಲಿಯಲು ಕಾಲಮಿತಿ ಇದೆ (3)
15. ಪ್ರವಾಸವನ್ನು ಮುಗಿಸಿದೊಡನೆ ಗೃಹಸ್ಥನ ಮುಂದಿನಾಶ್ರಮ (4)
17. ಮುಂಜಾನೆಯೇ ಸಂಭವಿಸಿದ ಹುಟ್ಟು (3)
18. ಖಾರವಾಗಿದ್ದ ವಸ್ತುವನ್ನು ಕೊಂಡ ಗ್ರಾಹಕ ಯಾರು? (3)
19. ನಾಚಿಕೆ ಏತಕ್ಕೆ? ಯಮನನ್ನೇ ಪ್ರಶ್ನಿಸಿದ ಬಾಲಕ ಗೊತ್ತೇ? (4)

**ಮೇಲಿಂದ ಕೆಳಕ್ಕೆ:**

1. ಸಾಹಸದ ಗುಣ–ಅವನ ಜೊತೆಗೇ ಹುಟ್ಟಿದ್ದು (3)
2. ಇಂಥ ಗೆಳೆಯರಾದರೆ ಬರೀ ಕಿರಿಕಿರಿ (3)
3. ಆಕೆಯ ಕಾರಿನದು ಕಪ್ಪು ಬಣ್ಣ (3)
5. ಸಾಧನೆಗೆ ಎಲ್ಲವೂ ಒಳ್ಳೆಯದೇ ದಿನ (3)
7. ಅಬ್ಬರ ತೋರಲು ತಕ್ಕಂತಿದೆ ಈ ಬಟ್ಟೆ ಉಡುಪು (3)
8. ಸಿರಿಗೆರೆಯಲ್ಲಿ ಕೊಂಡದ್ದು ಭಾರೀ ಕುಕ್ಕೆ (3)
9. ಅಣ್ಣನಿಗೆ ಪ್ರಿಯನಾದ ತಮ್ಮ (3)
10. ವೇಳೆಗೆ ತಕ್ಕಂತಹ ಜ್ಞಾನ (3)
12. ಖನಿಜ ಕಂಡ ಸ್ಥಳ ಭೂಮಿ–ಆಕಾಶ ಸೇರುವಲ್ಲಿ (3)
14. ಕುರುಡಾದರೇನು? ಅದು ಗೂಳಿಯದೇ ಗುಟುರು (3)
15. ವಿಮಾನದಲ್ಲಿ ಪುರಾಣ ಪ್ರಸಿದ್ಧ ಕುಳ್ಳ–ದೇವ (3)
16. ಅಸ್ತಂಗತ ಅಲ್ಲ. ನಿಂತುಹೋಗಿದೆ ಅಷ್ಟೆ (3)

## ಪದಬಂಧ: 17-2-2011ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಬಡಿವಾರ; 3. ಸಂದೇಹ; 4. ಜತನ; 6. ಸಪ್ತಪದ; 8. ನಸುನಗು; 10. ಕಮನೀಯ; 12. ತಡಸಲು; 16. ವಸನ; 17. ರಯಗ; 18. ತೆಗಳಿಕೆ.

**ಮೇಲಿಂದ ಕೆಳಕ್ಕೆ:**

1. ಬಹಳ; 2. ರಜಕ; 3. ಸಂತಾಪ; 5. ನಮಿಸು; 6. ಸಮರ್ಪಕ; 7. ದಯನೀಯ; 8. ನವನೀತ; 9. ಗುಡಿಸಲು; 11. ನೀರವ; 13. 'ಡರುಗ'; 14. ಘನತೆ; 15. ಪರಕೆ.

# ಖಗ ಸೋಜಿಗ



**'ಕ್ಯಾಸೋವರೀ' – ಏನು ವಿಶೇಷ?**

'ಕ್ಯಾಸೋವರೀ'–ಅದೊಂದು ಹಕ್ಕಿ. ಹಾರಲಾರದ, ನೆಲವಾಸಿಯಾದ ಈ ಹಕ್ಕಿಯ ನೈಸರ್ಗಿಕ ನೆಲೆ ನ್ಯೂಗಿನಿ ದ್ವೀಪ ಮತ್ತು ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ವೃಷ್ಟಿವನಗಳಿಗಷ್ಟೇ ಸೀಮಿತ. ಆಸ್ಟ್ರೇಲಿಯಾದಲ್ಲೇ ಇರುವ 'ಎಮು'ವಿನಂತೆ ಹಾಗೂ ಆಫ್ರಿಕದ 'ಆಸ್ಟ್ರಿಚ್'ನಂತೆ ಕ್ಯಾಸೋವರೀ ಕೂಡ ಬೃಹದ್ಗಾತ್ರದ ಹಕ್ಕಿ. ತಲೆಯಿಂದ ಹಿಂತುದಿವರೆಗೆ ಐದೂವರೆ ಅಡಿ ಉದ್ದ, ಸುಮಾರು ಅಷ್ಟೇ ಎತ್ತರ ಮತ್ತು ಸಮೀಪ ಅರವತ್ತು ಕಿಲೋ ತೂಕ ಮುಟ್ಟುವ ಈ ಹಕ್ಕಿಯ ಶರೀರ ಲಕ್ಷಣಗಳು ವಿಚಿತ್ರ–ವರ್ಣಮಯ. ಉದ್ದುದ್ದನಾದ ಮುಳ್ಳುಕಡ್ಡಿಗಳಂಥ ಗರಿಗಳ ಹೊರೆ ಹೊತ್ತ ದೇಹ. ಗಾಢ ನೀಲಿ ವರ್ಣದ, ಒರಟು ಚರ್ಮ ಮುಚ್ಚಿದ, ಬೋಳು ಬೋಳಾದ ಕತ್ತು–ಮುಖ. ಉದ್ದನ್ನ ಬಲಿಷ್ಠ ಕಾಲುಗಳು, ಕಾಲ್ಬೆರಳ ತುದಿಗಳಲ್ಲಿ ಚೂರಿಗಳಂತೆ ಚಾಚಿದ ಉಗುರುಗಳು, ತಲೆಯ ಮೇಲೆ ಕೊಂಬಿನಂಥ ವಸ್ತುವಿನ ಒಂದು ಗಟ್ಟಿ ಕಿರೀಟ. ಈ ಹೆಲ್ಮೆಟ್ ಕ್ಯಾಸೋವರಿಯ ಅತಿ ವಿಶಿಷ್ಟ ಲಕ್ಷಣ. ಜೊತೆಗೆ ನೀಲಿ ಕತ್ತಿನ ಮುಂದೆ ತೂಗುಬಿದ್ದ ಗಾಢ ಕೆಂಪು ಚರ್ಮದ ಮಡಿಕೆ ಬೇರೆ! (ಚಿತ್ರ ನೋಡಿ)

ಸ್ಪಷ್ಟವಾಗಿಯೇ ಕ್ಯಾಸೋವರೀ ತುಂಬ ಬಲಿಷ್ಠ ಹಕ್ಕಿ. ವೃಷ್ಟಿವನದಲ್ಲಿ ಏಕಾಂಗಿಯಾಗಿ ಅಲೆದಾಡುತ್ತ ಬದುಕುವುದು ಅದರ ಜೀವನ ಕ್ರಮ. ಆಳದ ಧ್ವನಿಯ, ತಾರಕ ಸ್ಥಾಯಿಯ 'ಬೂಮ್ ಬೂಮ್' ಶಬ್ದ ಹೊಮ್ಮಿಸುತ್ತ ದಟ್ಟಡವಿಯ ಸಸ್ಯ ರಾಶಿಯ ನಡುವೆ ನುಗ್ಗಿ ನುಗ್ಗಿ ಓಡಾಡುವ ಈ ಹಕ್ಕಿಗೆ ಅದರ ಶಿರಸ್ತ್ರಾಣ ಒಂದು ಭದ್ರ ಕವಚ. ಅವಶ್ಯವಾದರೆ ತಾಸಿಗೆ ಅರವತ್ತು ಕಿ.ಮೀ. ವೇಗದಲ್ಲಿ ಓಡಬಲ್ಲ ಕ್ಯಾಸೋವರೀ ಬಹಳ ಧೈರ್ಯಶಾಲಿ. ಅಷ್ಟೇ ಶೀಘ್ರ ಕೋಪಿ ಕೂಡ. ಇತರ ಕ್ಯಾಸೋವರೀಗಳೇ ಆಗಲಿ, ಬೇರಾವುದೇ ಪ್ರಾಣಿಯೇ ಆಗಲಿ ಸಮೀಪ ಬರುವುದನ್ನು ಈ ಹಕ್ಕಿ ಸಹಿಸುವುದಿಲ್ಲ. ತೊಂದರೆ ಒದಗುವ ಸುಳಿವು ಸಿಕ್ಕಿದರಂತೂ ಕೂಡಲೇ ಶತ್ರುವಿನ ಮೇಲೆರಗಿ ಬಲಾಢ್ಯ ಕಾಲುಗಳಿಂದ ಒದೆಯುತ್ತದೆ. ಉಗುರುಗಳ ಏಟಿಗೆ ಸಿಲುಕುವ ಶತ್ರುವಿನ ದೇಹ ಛಿದ್ರಗೊಳ್ಳುತ್ತದೆ. ಕ್ಯಾಸೋವರೀ ಫಲಾಹಾರಿ ಹಕ್ಕಿ. ಅಡವಿಯ ಫಲವೃಕ್ಷಗಳಿಂದ ಉದುರುವ ಹಣ್ಣುಗಳೇ ಅದರ ಪ್ರಧಾನ ಆಹಾರ.

ಕ್ಯಾಸೋವರೀಗಳಲ್ಲಿ ಮರಿ ಸಾಕಣಾ ಹೊಣೆ ಸಂಪೂರ್ಣವಾಗಿ ಗಂಡಿನದು. ಸಂತಾನ ಕಾಲದಲ್ಲಿ ಗಂಡನ್ನು ಕೂಡಿ ಸ್ವಲ್ಪ ಕಾಲ ಜೊತೆಗಿದ್ದು ಮೊಟ್ಟೆಗಳನ್ನಿಟ್ಟು ಹೆಣ್ಣು ತನ್ನ ದಾರಿ ಹಿಡಿಯುತ್ತದೆ. ನೆಲದ ಮೇಲಿಟ್ಟ ಮೊಟ್ಟೆಗಳಿಗೆ ಕಾವಲು ನಿಂತು ಕಾವು ಕೊಟ್ಟು ಮರಿಮಾಡುವ ತಂದೆ ಹಕ್ಕಿ ಅಷ್ಟೂ ಕಾಲ– ಸುಮಾರು ಏಳು ವಾರಗಳ ಕಾಲ– ಕ್ಷಣವೂ ಎಡೆಬಿಡದೆ, ಅತ್ತಿತ್ತ ಹೋಗದೆ, ಆಹಾರ–ನೀರು ಇಲ್ಲದೆ ನಿಂತಿರುತ್ತದೆ. ಮೊಟ್ಟೆಗಳಿಂದ ಹೊರಬಂದ ಮರಿಗಳನ್ನು ಜೊತೆ ಜೊತೆಗೇ ಕರೆದೊಯ್ದು, ಶತ್ರುಗಳಿಂದ ರಕ್ಷಿಸಿ ಬದುಕಿನ ಕೌಶಲ್ಯಗಳನ್ನೆಲ್ಲ ತಂದೆ ಹಕ್ಕಿಯೊಂದೇ ಕಲಿಸುತ್ತದೆ. ಒಂದು ವರ್ಷದಲ್ಲಿ ಮರಿಗಳು ಸ್ವತಂತ್ರವಾಗಿ ಬದುಕಬಲ್ಲ ಸಾಮರ್ಥ್ಯ ಗಳಿಸುತ್ತವೆ. ಹಾಗಾದೊಡನೆ ತಂದೆ ಹಕ್ಕಿ ಮರಿಗಳ ಮೇಲಿನ ಆ ವರೆಗಿನ ಗಾಢ ಮೋಹವನ್ನು ಮರೆಯುತ್ತದೆ. ಮರಿಗಳನ್ನು ಅಡವಿಯಲ್ಲಿ ಅಟ್ಟುತ್ತದೆ. ಒಂಟಿ ಬದುಕಿಗೆ ಹಿಂದಿರುಗುತ್ತದೆ.

■ ಎನ್.ವಾಸುದೇವ್